ನೀವು ಆಡುವ ಮೊದಲೇ ಯೋಚನೆ ಮಾಡಿ ಮಾತಾಡಬೇಕು ಅಂದರೆ ಅದೆಂಥ ಸಮಾಜ? ನಾವಾಡೋ ಎಲ್ಲ ಮಾತುಗಳನ್ನು ಯೋಚನೆ ಮಾಡಿಯೇ ಮಾತಾಡ್ತೀವಾ? ನಮಗನಿಸಿದ್ದನ್ನು ಮಾತಾಡ್ತೇವೆ. ಆಮೇಲೆ ಕೂಡ ಯೋಚನೆ ಮಾಡ್ತೇವೆ. ವೇದಿಕೆ ಮೇಲೆ ನಿಂತು ಭಾಷಣ ಮಾಡೋಕೆ ಶುರುವಾದಮೇಲೆ ನನಗನಿಸಿದ್ದನ್ನು ಹೇಳ್ತೇನೆ. ಯೋಚನೆ ಮಾಡಿಯೇ ಮಾತಾಡ್ತೀನಿ ಅಂತ ಅಶ್ಯೂರನ್ಸ್ ಕೊಡಲಾರೆ. ಅಭಿಪ್ರಾಯ ಸ್ವಾತಂತ್ರ್ಯದ ಬಗ್ಗೆ ಇರೋದು ಒಂದೇ ಪ್ರಶ್ನೆ: ಅದು ಇದೆಯೊ ಇಲ್ಲವೋ? ಯಾವ ಸನ್ನಿವೇಶದಲ್ಲಿ ಅದಿದೆ, ಯಾವ ಸಂದರ್ಭದಲ್ಲಿ ಅದನ್ನ ನೀವು ಬಳಸ್ಕೊಳ್ಳಬಹುದು, ಯಾವ ಮಿತಿಯಲ್ಲಿ ಬಳಸಬಹುದು – ಇವೆಲ್ಲ ಬೆನ್ನ ಹಿಂದಗಡೆ ಚಾಕೂ ಮತ್ತು ಸೆನ್ಸಾರಿನ ಬೀಗವನ್ನು ಇಟ್ಟುಕೊಂಡು ಆಡುವ ಮಾತುಗಳು.

◆ **ನಿಮ್ಮ 'ಬಹುವಚನ ಭಾರತ' ಪುಸ್ತಕದ ಹಿನ್ನೆಲೆಯಲ್ಲಿ ಕೇಳ್ತಿದೇನೆ. ಅದರ ಶೀರ್ಷಿಕೆಗೆ ಕಾರಣವೇನು?**

ನಾನು ಬಹುವಚನ ಟೈಟಲನ್ನು ಎತ್ಕೊಂಡಿದ್ದು ಕೃಷ್ಣಶಾಸ್ತ್ರಿಗಳ 'ವಚನ ಭಾರತ'ದಿಂದ. 'ವಚನ ಭಾರತ' – 'ಬಹುವಚನ' ಭಾರತ. ಕೃಷ್ಣಶಾಸ್ತ್ರಿಗಳು ಮಹಾಭಾರತವನ್ನು ಕನ್ನಡಕ್ಕೆ ಭಾಷಾಂತರಿಸಿದರು. ಅದು ಸ್ವಲ್ಪಮಟ್ಟಿಗೆ ಭಾವಾನುವಾದ ಕೂಡ. ಅದು ಸಾಹಿತ್ಯ ಕೃತಿಯಾದ್ದರಿಂದ ಮಾತ್ರ ಅದನ್ನು ಮಾಡೋದಿಕ್ಕೆ ಸಾಧ್ಯವಾಯ್ತು. ಧಾರ್ಮಿಕ ಕೃತಿಯಾಗಿದ್ದರೆ ಬಹುಶಃ ಅವರದ್ದೇ ಇಂಟರ್‌ಪ್ರಿಟೇಶನ್ ಕೊಡುವ ಸ್ವಾತಂತ್ರ್ಯ ಇರಲಿಲ್ಲ. ಮುನ್ನುಡಿಯಲ್ಲಿ ಅದನ್ನು ಅರ್ಥೈಸಿದ್ದಾರೆ ಕೂಡ. ರಾಮಾಯಣವಂತೂ ಭಾಷಾಂತರ, ರೂಪಾಂತರ, ಅರ್ಥಾಂತರ ಏನೆಲ್ಲಾ ಅವಸ್ಥೆಗಳನ್ನ ದಾಟಿಬಂದಿದೆ. ಈ ರೀತಿ ಅವಕಾಶ ಇರೋದು, ಪ್ರತಿಯೊಂದು ಓದಿಗೂ ಒಂದೊಂದು ಅರ್ಥ ಇರೋದು ಮತ್ತು ಬಹುಓದುಗಳನ್ನ ಬಯಸುವಂಥದ್ದು, ಇದು ಸಾಹಿತ್ಯಕ್ಕೆ ಅದರಲ್ಲೂ ಕಾವ್ಯಕ್ಕೆ ಮಾತ್ರ ಇರೋ ಸಾಧ್ಯತೆ. ಧಾರ್ಮಿಕ ಪಠ್ಯಕ್ಕಿಲ್ಲ. ನಾನು ಎತ್ತಿ ಹಿಡೀತಾ ಇರೋದು ಧಾರ್ಮಿಕ ಮೌಲ್ಯಗಳನ್ನಲ್ಲ, ಸಾಹಿತ್ಯಕ ಮೌಲ್ಯಗಳನ್ನ. ●


## ನಿಮ್ಮ ನೆಚ್ಚಿನ 'ಮಯೂರ'ವನ್ನು ಅಂಚೆಯ ಮೂಲಕವೂ ತರಿಸಿಕೊಳ್ಳಬಹುದು

ನೀವು ಕಳುಹಿಸುವ ಡಿ.ಡಿ. 'ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್'– ಹೆಸರಿಗೆ ಇರಬೇಕು. ನೇರವಾಗಿ ಖಾತೆಗೆ ಹಣ ಕಳುಹಿಸುವವರು ಬೆಂಗಳೂರಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಹಾತ್ಮ ಗಾಂಧಿ ರಸ್ತೆ ಶಾಖೆಯ ಖಾತೆ ಸಂಖ್ಯೆ 64018861169ಗೆ ಜಮಾ ಮಾಡಬಹುದು. ಬ್ಯಾಂಕ್ ಐಎಫ್‌ಎಸ್‌ಸಿ ಕೋಡ್ SBIN0040006




ಚಂದಾ ಕಳುಹಿಸುವವರು ತಮ್ಮ ವಿಳಾಸ, ದೂರವಾಣಿ ಸಂಖ್ಯೆಯನ್ನು ಸ್ಪಷ್ಟವಾಗಿ ಬರೆಯಬೇಕು

**ಪ್ರಸರಣ ವಿಭಾಗ**
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್,
ನಂ 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು– 560 001
**ದೂರವಾಣಿ** : 080–25880219/202
**ಇ-ಮೇಲ್:**
circulation–blore@deccanherald.co.in



ಚಂದಾ ವಿವರ
(ಅಂಚೆ ವೆಚ್ಚ ಸೇರಿ)

**ದೇಶದ ಒಳಗೆ**
ವಾರ್ಷಿಕ: **300.00**
(12 ಸಂಚಿಕೆಗಳಿಗೆ)
ಅರ್ಧ ವಾರ್ಷಿಕ **150.00**
(6 ಸಂಚಿಕೆಗಳಿಗೆ)

**ವಿದೇಶಗಳಿಗೆ**
ವಾರ್ಷಿಕ: **1500.00**
(12 ಸಂಚಿಕೆಗಳಿಗೆ)
ಅರ್ಧ ವಾರ್ಷಿಕ **750.00**
(6 ಸಂಚಿಕೆಗಳಿಗೆ)